# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ,**

**ಗಾಳಿ ಆಂಜನೇಯ ಸ್ವಾಮಿ ದೇವಸ್ಥಾನ ಉಪ ವಿಭಾಗ, ಬಸವೇಶ್ವರ ಲೇಔಟ್,**

**3ನೇ ಮುಖ್ಯರಸ್ತೆ, ಕೈಲಾಶೇಶ್ವರ ದೇವಸ್ಥಾನ ಹಿಂಭಾಗ ಅತ್ತಿಗುಪ್ಪೆ, ಬೆಂಗಳೂರು-40,**

---

ಸಂಖ್ಯೆ: ಸ.ಕಾ.ನಿ.ಅ/ಗಾ.ಅ/ಪಿಆರ್/241/2020-21 ದಿನಾಂಕ:17-10-2020

**ದಿನಾಂಕ:17/10/2020 ರಂದು ವಾರ್ಡ ಸಂಖ್ಯೆ:132 ಅತ್ತಿಗುಪ್ಪೆ ವಾರ್ಡ ಸಮಿತಿ ಸಭೆ ನಡವಳಿಗಳು**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಚುನಾಯಿತ ಪ್ರತಿನಿಧಿಗಳ ಅಧಿಕಾರ ಅವಧಿಯು ಮುಕ್ತಾಯಗೊಂಡಿದ್ದರಿಂದ ಪಾಲಿಕೆ ಮತ್ತು ಸಾರ್ವಜನಿಕರ ನಡುವೆ ಸಮನ್ವಯ ಸಾಧಿಸಲು ಪ್ರತಿ ವಾರ್ಡಿಗೆ ಒಬ್ಬ ಹಿರಿಯ ನೋಡೆಲ್ ಅಧಿಕಾರಿಯನ್ನಾಗಿ ನೇಮಿಸಲಾಗಿರುತ್ತದೆ. ಮಾನ್ಯ ಆಯುಕ್ತರವರ ತಿದ್ದುಪಡಿ ಕಛೇರಿ ಆದೇಶ ಸಂಖ್ಯೆ: ಬಿ(12)5/ಪಿಆರ್/35/2020-21 ದಿನಾಂಕ:02/10/2020 ರಂದು ಶ್ರೀ ಬಸವರಾಜ ವೈ. ಅಂಬಿಗೇರ ಸಹಾಯಕ ಕಾನೂನು ಅಧಿಕಾರಿ ರವರನ್ನು ವಾರ್ಡ ಸಂಖ್ಯೆ:130 ರ ಅತ್ತಿಗುಪ್ಪೆಯ ನೋಡೆಲ್ ಅಧಿಕಾರಿಯನ್ನಾಗಿ ನೇಮಿಸಲಾಗಿರುತ್ತದೆ.

ದಿನಾಂಕ:17/10/2020 ರಂದು ಅಧ್ಯಕ್ಷರು ವಾರ್ಡ ನೋಡೆಲ್ ಅಧಿಕಾರಿ ಶ್ರೀ ಬಸವರಾಜ ವೈ. ಅಂಬಿಗೇರ, ಶ್ರೀ ಕೃಷ್ಣಮೂರ್ತಿ, ಕಾರ್ಯದರ್ಶಿ ಹಾಗೂ ವಾರ್ಡನ ಸಹಾಯಕ ಅಭಿಯಂತರರು, ಶ್ರೀ ಮಾರುತಿ ಹಿರಿಯ ಆರೋಗ್ಯ ಪರಿವೀಕ್ಷಕರು ಸದಸ್ಯರುಗಳು ಮತ್ತು ವಾರ್ಡ ವ್ಯಾಪ್ತಿಯಲ್ಲಿನ ಸ್ಥಳಿಯ ಸಂಘ ಸಂಸ್ಥೆಗಳಾದ ಚಂದ್ರಾಬಡಾವಣೆ ನಿವಾಸಿಗಳ ಸಂಘ ಮತ್ತು ಸ್ಕೈಲೈನ್ ಸಿಟಿ ಅಪಾರ್ಟಮೆಂಟ್ ಚೇರಮನ್ ರವರು ಸಭೆಯಲ್ಲಿ ಸದಸ್ಯರಾಗಿ ಭಾಗವಹಿಸಿರುತ್ತಾರೆ. ಅದಲ್ಲದೆ ಶ್ರೀಮತಿ ವಾಣಿ ಮಹಿಳಾ ಸದಸ್ಯರು ಮತ್ತು ನಾಗರೀಕರ ಪ್ರತಿನಿಧಿಯಾಗಿ ಸಭೆಯಲ್ಲಿ ಭಾಗವಿಸಿರುತ್ತಾರೆ.

**ಸಭೆಗೆ ಹಾಜರಾಗಿ ಭಾಗವಹಿಸಿದ ಸದಸ್ಯರು ಮತ್ತು ಸಾರ್ವಜನಿಕರ ವಿವರ:**

| ಕ್ರಮ ಸಂಖ್ಯೆ | ಅಧಿಕಾರಿಗಳು ಮತ್ತು ಸದಸ್ಯರುಗಳ ಹೆಸರು | ಪದನಾಮ | ಇಲಾಖೆ | ಹಾಜರಾತಿ |
|---|---|---|---|---|
| 1 | ಶ್ರೀ ಬಸವರಾಜ ವೈ. ಅಂಬಿಗೇರ | ನೋಡೆಲ್ ಅಧಿಕಾರಿ | ಕಾನೂನು ಕೋಶ | ಹಾಜರಾಗಿರುತ್ತಾರೆ. |
| 2 | ಶ್ರೀ ಕೃಷ್ಣಮೂರ್ತಿ | ಕಾರ್ಯದರ್ಶಿಗಳು | ಸಹಾಯಕ ಅಭಿಯಂತರರು ವಾರ್ಡ ನಂ.132 | ಹಾಜರಾಗಿರುತ್ತಾರೆ. |
| 3 | ಶ್ರೀ ಮಾರುತಿ ಪಿ. ಸೇಟ್ | ಸದಸ್ಯರು | ಹಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ ನಂ.132 | ಹಾಜರಾಗಿರುತ್ತಾರೆ. |
| 4 | ಶ್ರೀ ಬಿ. ಪ್ರಕಾಶ್ | ಸದಸ್ಯರು | ಕಂದಾಯ ಪರಿವೀಕ್ಷಕರು | ಹಾಜರಾಗಿರುತ್ತಾರೆ. |
| 5 | ಶ್ರೀಮತಿ ವಾಣಿ | ಸದಸ್ಯರು | ನಾಗರೀಕ ಪ್ರತಿನಿಧಿಗಳು | ಹಾಜರಾಗಿರುತ್ತಾರೆ. |
| 6 | ಶ್ರೀ ಸಿ. ನಾರಾಯಣ | ಸದಸ್ಯರು | ಅಧ್ಯಕ್ಷರು, ಚಂದ್ರಾಬಡಾವಣೆ ನಿವಾಸಿಗಳ ಸಂಘ | ಹಾಜರಾಗಿರುತ್ತಾರೆ. |
| 7 | ಶ್ರೀ ಸಿ.ಹೆಚ್.ಪೈ | ಸದಸ್ಯರು | ಚೇರಮನ್ ಸ್ಕೈಲೈನ್ ಸಿಟಿ ಅಪಾರ್ಟಮೆಂಟ್ | ಹಾಜರಾಗಿರುತ್ತಾರೆ. |

ವಾರ್ಡ ಸಂಖ್ಯೆ:132 ಕ್ಕೆ ಸಂಬಂಧಪಟ್ಟಂತೆ ಹಾಜರಾದ ಇತರೆ ಇಲಾಖೆಯ ಅಧಿಕಾರಿ ಮತ್ತು ಸಿಬ್ಬಂದಿಗಳ ವಿವರ

| ಕ್ರಮ ಸಂಖ್ಯೆ | ಅಧಿಕಾರಿ/ಸಿಬ್ಬಂದಿಗಳ ಹೆಸರು | ಪದನಾಮ | ಇಲಾಖೆ | ಹಾಜರಾತಿ |
|---|---|---|---|---|
| 1 | ಶ್ರೀ ನವೀನ್ ಆರ್. ಶಿರೂರ | ಪೋಲಿಸ್ ಸಬ್ ಇನ್ಸ್‌ಪೆಕ್ಟರ್, ಚಂದ್ರಾಬಡಾವಣೆ | ಪೋಲಿಸ್ | ಹಾಜರಾಗಿರುತ್ತಾರೆ. |
| 2 | ಶ್ರೀ ಚಿದಾನಂದ ಎಲ್.ಬಿ. | ಆರ್.ಎಫ್.ಓ. | ಅರಣ್ಯ ಇಲಾಖೆ, ಬಿಬಿಎಂಪಿ ದಕ್ಷಿಣ | ಹಾಜರಾಗಿರುತ್ತಾರೆ. |
| 3 | ಶ್ರೀ ದೊರೆಸ್ವಾಮಯ್ಯ | ಎ.ಎಸ್.ಐ. ಬ್ಯಾಟರಾಯನಪುರ ಟ್ರಾಫಿಕ್ ಪಿ.ಎಸ್. | ಪೋಲಿಸ್ | ಹಾಜರಾಗಿರುತ್ತಾರೆ. |
| 4 | ಶ್ರೀ ರಾಹುಲ್ ರಾಠೋಡ್ | ಸಹಾಯಕ ಅಭಿಯಂತರರು | ಬಿ.ಡಬ್ಲ್ಯೂ.ಎಸ್.ಎಸ್.ಬಿ. | ಹಾಜರಾಗಿರುತ್ತಾರೆ. |
| 5 | ಶ್ರೀ ಎನ್.ಟಿ. ಲಕ್ಷ್ಮೀನರಸಿಂಹಯ್ಯ | ಮೇಸ್ತ್ರಿ | ತೋಟಗಾರಿಕೆ | ಹಾಜರಾಗಿರುತ್ತಾರೆ. |

ಸಭೆಯ ಪ್ರಾರಂಭಿಕ ಹಂತದಲ್ಲಿ ವಾರ್ಡ ಸಮಿತಿಯ ಅಧ್ಯಕ್ಷರು ತಮ್ಮನ್ನು ತಾವು ಪರಿಚಯ ಮಾಡಿಕೊಂಡು ವಾರ್ಡ ಸಮಿತಿಯ ಕಾರ್ಯ ನಿರ್ವಹಣೆಯ ಬಗ್ಗೆ ವಿವರಿಸಿದರು. ದಿನಾಂಕ:03/10/2020 ರಂದು ಸಭೆಯಲ್ಲಿ ತೆಗೆದುಕೊಂಡ ತೀರ್ಮಾನಗಳ ಬಗ್ಗೆ ಮತ್ತು ಕೈಗೊಂಡ ಕ್ರಮಗಳ ಬಗ್ಗೆ ಚರ್ಚಿಸಲಾಯಿತು. ಈ ಹಿಂದೆ ಸಭೆಯ ನಡವಳಿಯನ್ನು ದಾಖಲಿಸಿರುವಂತೆ ಸ್ಕೈಲೈನ್ ಸಿಟಿ ಅಪಾರ್ಟಮೆಂಟ್ ಸುತ್ತಮುತ್ತಲಿನ ಜನರಿಗೆ ಕೋವಿಡ್-19 ಟೆಸ್ಟ್ ಮಾಡಿಸಿರುತ್ತಾರೆ. ಹಿರಿಯ ಆರೋಗ್ಯ ಪರಿವೀಕ್ಷಕರು ಸಭೆಯ ಗಮನಕ್ಕೆ ಬರೆದಿರುತ್ತಾರೆ.

ಘನತ್ಯಾಜ್ಯ ನಿರ್ವಹಣೆಯ ಕುರಿತಾಗಿ ಕಿರಿಯ ಆರೋಗ್ಯ ಪರಿವೀಕ್ಷಕರು ಕಾಲಕಾಲಕ್ಕೆ ಬ್ಲ್ಯಾಕ್ ಸ್ಪಾಟ್‌ಗಳನ್ನು ಕ್ಲಿಯರ್ ಮಾಡುವ ಬಗ್ಗೆ ಕ್ರಮಕೈಗೊಳ್ಳುತ್ತಿರುವುದಾಗಿ ಮತ್ತು ಮಾಡುತ್ತಿರುವುದಾಗಿ ಎಂದು ತಿಳಿಸಿರುತ್ತಾರೆ. ಈ ಹಿಂದಿನ ಸಭೆಯ ನಡವಳಿಯ ವಿಷಯಗಳಲ್ಲಿ ಚರ್ಚಿಸಿದ ನಂತರ ಈ ಕೆಳಕಂಡ ಅಂಶಗಳ ಬಗ್ಗೆ ಚರ್ಚೆಗೆ ತೆಗೆದುಕೊಳ್ಳಲಾಯಿತು.

1. **ಕೋವಿಡ್-19**: ವಿಷಯಕ್ಕೆ ಸಂಬಂಧಿಸಿದಂತೆ ಸಭೆಯಲ್ಲಿ ಹಾಜರಿದ್ದ ಹಿರಿಯ ಆರೋಗ್ಯ ಪರಿವೀಕ್ಷಕರು ವೈರಾಣು ಹರಡುವಿಕೆಯನ್ನು ತಡೆಗಟ್ಟುವ ನಿಟ್ಟಿನಲ್ಲಿ ಕಾರ್ಯನಿರ್ವಹಣೆಗೆ ಸವಿಸ್ತಾರವಾಗಿ ತಿಳಿಸಿರುತ್ತಾರೆ. ಪ್ರತಿದಿನ ವಾರ್ಡ ಸಂಖ್ಯೆ:132 ರಲ್ಲಿ 100 ರಿಂದ 120 ಜನರಿಗೆ ಕೋವಿಡ್-19 ಪರೀಕ್ಷೆಯನ್ನು ಮಾಡಿಸಲಾಗುತ್ತದೆ ಎಂದು ತಿಳಿಸಿರುತ್ತಾರೆ. ಇಷ್ಟು ಪರೀಕ್ಷೆಗಳಲ್ಲಿ ಅಂದಾಜು 2 ರಿಂದ 3 ಜನರಿಗೆ ಕೋವಿಡ್-19 ಪೊಸಿಟಿವ್ ಬರುವ ಸಂಭವ ಇರುತ್ತದೆಂದು ತಿಳಿಸಿರುತ್ತಾರೆ. ವಾರ್ಡ ಮಟ್ಟದಲ್ಲಿ ಕೋವಿಡ್-19 ಪರೀಕ್ಷೆಗಳನ್ನು ಕ್ಯಾಂಪ್‌ಗಳನ್ನಾಗಿ ಹಾಕಿ ಮಾಡಲಾಗುತ್ತಧೆ ಎಂದು ತಿಳಿಸಿರುತ್ತಾರೆ.
2. **ಘನತ್ಯಾಜ್ಯ ನಿರ್ವಹಣೆ :** ಸಭೆಯಲ್ಲಿ ಹಾಜರಿದ್ದ ಕಿರಿಯ ಆರೋಗ್ಯ ಪರಿವೀಕ್ಷಕರು ಈ ಕೆಳಕಂಡ ಮಾಹಿತಿಯನ್ನು ಸಭೆಗೆ ಸಲ್ಲಿಸಿರುತ್ತಾರೆ. ಮನೆಮನೆಗಳಿಂದ ಕಸ ಸಂಗ್ರಹಣೆ ಮಾಡಲು ಒಟ್ಟು ನಿಯೋಜಿಸಲಾಗಿರುವ ಪೌರಕಾರ್ಮಿಕರ ಸಂಖ್ಯೆ:115 ಎಂದು ತಿಳಿಸಿರುತ್ತಾರೆ. ಇದಲ್ಲದೆ ವಾರ್ಡ ಮಟ್ಟದಲ್ಲಿ ಒಟ್ಟು 18 ಆಟೋ ಟಿಪ್ಪರ್‌ಗಳು ಕಸ ಸಂಗ್ರಹಣೆ ಮಾಡುತ್ತಿವೆ ಎಂದು ತಿಳಿಸಿರುತ್ತಾರೆ. ಹಾಗೂ ವಾರ್ಡ ಮಟ್ಟದ ಮಿಕ್ಸಡ್ ಕಸವನ್ನು ಈ ಎರಡು ಲಾರಿಗಳಲ್ಲಿ ಹಾಗೂ ಹಸಿ ಕಸವನ್ನು ಒಂದು ಲಾರಿಯನ್ನು ಸಾಗಿಸಲಾಗುತ್ತದೆಂದು ತಿಳಿಸಿರುತ್ತಾರೆ.

ಸಭೆಯಲ್ಲಿ ಹಾಜರಿದ್ದ ಮಹಿಳಾ ಸದಸ್ಯರು ರಾತ್ರಿ ಹಾಗೂ ಹಗಲಿನ ಸಮಯದಲ್ಲಿ ರಸ್ತೆಯ ಬದಿಯಲ್ಲಿ ಕಸವನ್ನು ಎಸೆದು ಹೋಗುವುದನ್ನು ನಿಯಂತ್ರಿಸಲು ಕ್ರಮಕೈಗೊಳ್ಳಬೇಕಾಗಿರುತ್ತದೆ ಎಂದು ತಿಳಿಸಿದ ಮೇರೆಗೆ ಪೋಲಿಸ್ ಸಬ್ ಇನ್ಸ್‌ಪೆಕ್ಟರ್ ಹಾಗೂ ಸಂಚಾರಿ ಪೋಲಿಸರ ಗಮನಕ್ಕೆ ಬಂದಾಗ ನಾವು ಸಹಿತ ದಂಡವನ್ನು ಹಾಕುತ್ತೇವೆ ಎಂದು ತಿಳಿಸಿರುತ್ತಾರೆ. ಹಾಗೂ ಕಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್ ಮಟ್ಟದಲ್ಲಿ ಕಸ ಸಂಗ್ರಹಣೆ ಮತ್ತು ಸಾಗಾಣೆ ಶಿಸ್ತುಬದ್ದವಾಗಿ ನಡೆಯುತ್ತಿದೆ ಎಂದು ತಿಳಿಸಿರುತ್ತಾರೆ.

ಮಹಿಳಾ ಸದಸ್ಯರು ವೆಂಕಟೇಶ್ವರ ಲೇಔಟ್‌ನಲ್ಲಿ 2 ರಿಂದ 3 ಮಸಿದಿಗಳಿದ್ದು, ಸದರಿ ಮಸಿದಿಗಳು ಉಪಯೋಗಿಸುವ ಲೌಡ್ ಸ್ಪೀಕರ್‌ಗಳು ಅತಿ ಜೋರಾದ ಶಬ್ದಗಳನ್ನು ಮಾಡುವುದರಿಂದ ಸುತ್ತ ಮುತ್ತಗಳ ಜನರಿಗೆ ತೊಂದರೆಯಾಗುತ್ತದೆಂದು ತಿಳಿಸಿರುತ್ತಾರೆ. ಸ್ಥಳದಲ್ಲಿ ಹಾಜರಿದ್ದ ಪಿ.ಎಸ್.ಐ ರವರು ಇದು ಕಮಿನಲ್ ವಿಷಯವಾಗಿರುವುದರಿಂದ ಸೂಕ್ಷ್ಮವಾಗಿ ಬಗೆಯರಿಸುವುದು ಸೂಕ್ತವೆಂದು ತಿಳಿಸಿರುತ್ತಾರೆ.

ಸಭೆಯಲ್ಲಿ ಹಾಜರಿದ್ದ ಸದಸ್ಯರು ಕೋಳಿಮಾಂಸದ ಅಂಗಡಿಗಳಿಂದ ತ್ಯಾಜ್ಯ ನಿರ್ವಹಣೆ ಸಂಗ್ರಹಿಸಿ ಸಾಗಾಣಿಕೆ ಮಾಡುವುದು ಸಮರ್ಪಕವಾಗಿ ನಡೆಯುತ್ತಿಲ್ಲವೆಂದು ಗಮನಕ್ಕೆ ತಂದಿರುತ್ತಾರೆ. ಇದರ ಕುರಿತಾಗಿ ಕಿರಿಯ ಆರೋಗ್ಯ ಪರಿವೀಕ್ಷಕರು ಸಾಕಷ್ಟು ಬಾರಿ ಕೋಳಿಮಾಂಸದ ಅಂಗಡಿ ಮಾಲೀಕರಿಗೆ ಎಚ್ಚರಿಕೆ ನೀಡಿರುವುದನ್ನು ತಿಳಿಸಿರುತ್ತಾರೆ. ಇದಲ್ಲದೆ ಕೋಳಿಮಾಂಸದ ಅಂಗಡಿಗಳಿಗೆ ಉದ್ದಿಮೆ ಪರವಾನಿಗೆ ವೆಟರ್‌ನರಿ ಇನ್ಸ್‌ಪೆಕ್ಟರ್ ರವರು ಪರಿಶೀಲನೆ ಮಾಡಿ ಕ್ರಮಕೈಗೊಳ್ಳಬೇಕಾಗಿರುತ್ತದೆ ಎಂದು ತಿಳಿಸಿದ್ದು, ಆದರೆ ಸಭೆಗೆ ವಾರ್ಡನ ವೆಟರ್‌ನರಿ ಇನ್ಸ್‌ಪೆಕ್ಟರ್ ರವರು ಹಾಜರಾಗಿರುವುದಿಲ್ಲ. ಸದರಿ ರವರನ್ನು ಮುಂದಿನ ಸಭೆಗೆ ಹಾಜರಾಗಲು ಮತ್ತು ನೋಟಿಸನ್ನು ನೀಡಲು ತಿಳಿಸಲಾಯಿತು.

ಕಿರಿಯ ಆರೋಗ್ಯ ಪರಿವೀಕ್ಷಕರು ಮನೆಮನೆಗಳಿಂದ ಮತ್ತು ವಾಣಿಜ್ಯ ಸಂಕೀರ್ಣಗಳಿಂದ ತ್ಯಾಜ್ಯವನ್ನು ವಿಂಗಡಿಸಿ, ನೀಡುತ್ತಿರುವ ಬಗ್ಗೆ ಪ್ರತಿದಿನ ಪರಿಶೀಲಿಸಿ ಕ್ರಮಕೈಗೊಳ್ಳಲು ಸೂಚಿಸಲಾಯಿತು. ಇದಲ್ಲದೆ ವಾರ್ಡ ಮಟ್ಟದಲ್ಲಿ ದಿನಾಲು ಹಾಜರಾಗಿ ಕೆಲಸ ನಿರ್ವಹಿಸುವ ಪೌರಕಾರ್ಮಿಕರ, ಆಟೋಟಿಪ್ಪರಗಳ ವಿವರಗಳನ್ನು ವಾರ್ಡ ಕಮಿಟಿ 132 ವಾಟ್ಸ್‌ಅಪ್ ಗ್ರೂಪ್‌ಗೆ ಹಾಕಲು ತಿಳಿಸಲಾಯಿತು.

3. **ವಾರ್ಡ ಮಟ್ಟದ ಕಾಮಗಾರಿ:** ಸಭೆಗೆ ಹಾಜರಾಗಿದ್ದ ಚಂದ್ರಾ ಬಡಾವಣೆ ನಿವಾಸಿಗಳ ಅಧ್ಯಕ್ಷರು ಹಾಗೂ ಸ್ಕೈಲೈನ್ ಸಿಟಿ ಅಪಾರ್ಟಮೆಂಟ್ ಚೇರಮನ್‌ರು ಅತ್ತಿಗುಪ್ಪೆ ವಾರ್ಡನಲ್ಲಿ ಕೈಗೊಳ್ಳುವ ವಿಷಯಗಳಲ್ಲಿ ತಮ್ಮೊಂದಿಗೆ ಚರ್ಚಿಸಿದಲ್ಲಿ ನಮ್ಮ ಸಲಹೆಗಳನ್ನು ನೀಡುತ್ತೇವೆಂದು ತಿಳಿಸಿರುತ್ತಾರೆ. ಇದಲ್ಲದೆ ಸದರಿ ಸದಸ್ಯರು ಸ್ಕೈಲೈನ್ ಸಿಟಿ ಅಪಾರ್ಟಮೆಂಟ್ ಮುಂದಿನ ಪಾರ್ಕನಲ್ಲಿ ಶಿಥಿಲಾವಸ್ಥೆಯಲ್ಲಿರುವ ಪೇ & ಯುಸ್ ಶೌಚಾಲಯವನ್ನು ನವೀಕರಣಗೊಳಿಸಿ ಸಾರ್ವಜನಿಕರ ಉಪಯೋಗಕ್ಕೆ ಬಳಸಲು ಅವಕಾಶ ಕಲ್ಪಿಸಬೇಕೆಂದು ಕೋರಿಕೊಂಡಿರುತ್ತಾರೆ. ಇದಲ್ಲದೆ ಈ ಹಳೆಯ ಶೌಚಾಲಯದಲ್ಲಿ ಸಾರ್ವಜನಿಕರು ಹೋಗದೇ ರಸ್ತೆಯ ಬದಿಗಳಲ್ಲಿ ಮೂತ್ರ ವಿಸರ್ಜನೆ ಮಾಡುವುದನ್ನು ನಿಯಂತ್ರಿಸಲು ಕ್ರಮಕೈಗೊಳ್ಳಬೇಕೆಂದು ಕೋರಿರುತ್ತಾರೆ. ಸದರಿ ಸದಸ್ಯರ ಮನವಿಯನ್ನು ಪರಿಗಣಿಸಿ, ಸ್ಥಳ ಪರಿಶೀಲನೆ ಮಾಡಿ ಮುಂದೆ ಕ್ರಮಕೈಗೊಳ್ಳಲು ಸಹಾಯಕ ಅಭಿಯಂತರರು 132 ರವರಲ್ಲಿ ಸೂಚಿಸಲಾಯಿತು.

4. ಸಹಾಯಕ ಅಭಿಯಂತರರು ಒಂಟಿ ಮನೆ ಮಂಜೂರಾತಿ ಬಗ್ಗೆ ಸಭೆಗೆ ತಿಳಿಸುತ್ತಾ ಪ್ರತಿ ವಾರ್ಡಿಗೆ ವೈಯಕ್ತಿಕ ವಸತಿ ನಿರ್ಮಾಣ ಮಾಡಿಕೊಳ್ಳಲು ಮಾನ್ಯ ಆಯುಕ್ತರವರ ಆದೇಶ ಸಂಖ್ಯೆ :ಕ.ಆ/ಕೇಂ.ಕ/ಪಿ.ಆರ್/401/18-19, ದಿನಾಂಕ:-25-10-2018 ರಲ್ಲಿನ ಆದೇಶದಂತೆ ಎಸ್.ಸಿ./ಎಸ್.ಟಿ. ಜನಾಂಗದ 10 ಜನ ಫಲಾನುಭವಿಗಳಿಗೆ ಮತ್ತು ಓ.ಬಿ.ಸಿ. ಜನಾಂಗದ 5 ಜನ ಫಲಾನುಭವಿಗಳಿಗೆ ಒಟ್ಟು 15 ಜನ ಫಲಾನುಭವಿಗಳನ್ನು ಆಯ್ಕೆ ಮಾಡುವ ಅವಕಾಶವನ್ನು ಸಭೆಗೆ ತಿಳಿಸಿದರು.

   ಅದರಂತೆ ಶ್ರೀಮತಿ. ಮುದ್ದಮ್ಮ ಬಿನ್ ರಂಗಪ್ಪ, ನಂ.27, 3ನೇ ಮುಖ್ಯರಸ್ತೆ, ಅತ್ತಿಗುಪ್ಪೆ, ವಿಜಯನಗರ, ಬೆಂಗಳೂರು ಹಿಂದುಳಿದ ವರ್ಗಕ್ಕೆ ಸೇರಿದ್ದು, ಕಡತಗಳನ್ನು ಸಭೆಯ ಮುಂದೆ ಮಂಡಿಸಲಾಗಿ ವಾರ್ಡ್ ಕಮಿಟಿ ಸದಸ್ಯರುಗಳು ಸರ್ವಾನುಮತದಿಂದ ಸದರಿ ಫಲಾನುಭವಿಗಳನ್ನು 2020-21ನೇ ಸಾಲಿಗೆ ಆಯ್ಕೆ ಮಾಡಿ ಅನುಮೋದಿಸಿರುತ್ತಾರೆ.

5. **ಅರಣ್ಯ ವಿಭಾಗ:** ಸಭೆಯಲ್ಲಿ ಹಾಜರಿದ್ದ ಸದಸ್ಯರಾದ ಶ್ರೀ ಸಿ.ಹೆಚ್.ಪೈ.ರವರು ವಿಲೇಜ್ ಹೈಪರ್ ದಿಂದ ಅಂತಿಮ ರಸ್ತೆ ರವರಿಗೂ ಬೆಳೆದ ಗಿಡಮರಗಳ ರೆಂಬೆಕೊಂಬೆಗಳನ್ನು ಕತ್ತರಿಸಲು ಕೋರಿಕೊಂಡಿರುತ್ತಾರೆ. ಏಕೆಂದರೆ ಮರಗಳು ರೆಂಬೆ ಕೊಂಬೆಗಳ ನೆರಳಿನಿಂದಾಗಿ ಬೀದಿ ದೀಪಗಳ ಬೆಳಕು ಸರಿಯಾಗಿ ಬೀಳುತ್ತಿಲ್ಲವೆಂದು ತಿಳಿಸಿರುತ್ತಾರೆ. ಸಭೆಯಲ್ಲಿ ಹಾಜರಿದ್ದ ಆರ್.ಎಫ್.ಓ. ಅಧಿಕಾರಿ ಸದರಿ ಮರಗಳ ರೆಂಬೆ ಕೊಂಬೆಗಳನ್ನು ಕತ್ತರಿಸಿ ಟ್ರಿಮ್ ಮಾಡಲಾಗುವುದೆಂದು ಸಭೆಗೆ ತಿಳಿಸಿರುತ್ತಾರೆ.

ಸಭೆಯಲ್ಲಿ ಹಾಜರಿದ್ದ ಚಂದ್ರಾಬಡಾವಣೆ ನಿವಾಸಿಗಳ ಸಂಘದ ಅಧ್ಯಕ್ಷರು ಮರಗಳನ್ನು ಕತ್ತರಿಸಿ ಅದರ ರೆಂಬೆಕೊಂದಿಗಳನ್ನು ರಸ್ತೆಬದಿಗಳಲ್ಲೆ ಬಿಡಲಾಗುತ್ತಿದೆ. ಅದನ್ನು ತೆರವುಗೊಳಿಸಲು ಕೋರಿಕೊಂಡರು ಕ್ರಮವಹಿಸುವುದಿಲ್ಲವೆಂದು ತಿಳಿಸಿರುತ್ತಾರೆ. ಸಭೆಯಲ್ಲಿ ಹಾಜರಿದ್ದ ಆರ್.ಎಫ್.ಓ. ರವರು ತೆರವುಗೊಳಿಸಲಾಗುವುದೆಂದು ತಿಳಿಸಿರುತ್ತಾರೆ. ಸದರಿ ಅಧಿಕಾರಿ ಕತ್ತರಿಸಿದ ಮರದ ತುಂಡುಗಳನ್ನು ಡಂಪಿಂಗ್ ಆಡ್ ಸಾಗಿಸಲು ಸಾಕಷ್ಟು ಸಿಬ್ಬಂದಿಯ ಕೊರತೆ ಇರುತ್ತದೆ. ಹಾಗೂ ಸೂಕ್ತ ಡಂಪಿಂಗ್ ಆಡ್ ಇರುವುದಿಲ್ಲವೆಂದು ತಿಳಿಸುತ್ತಾ ಸಾರ್ವಜನಿಕರ ಕುಂದುಕೊರತೆಗಳನ್ನು ಪರಿಹರಿಸಲಾಗುವುದೆಂದು ಸಭೆಗೆ ತಿಳಿಸಿರುತ್ತಾರೆ.

6. **ವಾರ್ಡನಲ್ಲಿರುವ ಫುಟ್‌ಪಾತ್**ಗಳನ್ನು ಒತ್ತುವರಿ ಮಾಡಿದ್ದರೆ ತೆರವುಗೊಳಿಸಲು ಸಹಾಯಕ ಅಭಿಯಂತರರಿಗೆ ಸೂಚಿಸುತ್ತಾ ಸಹಾಯಕ ಪೋಲಿಸ್ ಇಲಾಖೆ ಸಹಾಯವನ್ನು ಪಡೆಯಲು ತಿಳಿಸಲಾಯಿತು.

7. **ಬೀದಿದೀಪಗಳ ನಿರ್ವಹಣೆ** ಕುರಿತಂತೆ ಚರ್ಚಿಸಲಾಗಿ ಇದರ ಸಿಬ್ಬಂದಿಗಳು ಹಾಗೂ ಅಧಿಕಾರಿಗಳು ಸಭೆಗೆ ಹಾಜರಾಗಿರುವುದಿಲ್ಲ. ಮುಂದಿನ ಸಭೆಗೆ ಬೀದಿದೀಪ ನಿರ್ವಹಣೆ ಮಾಡುವ ಗುತ್ತಿಗೆದಾರರು ಸಭೆಗೆ ಹಾಜರಾಗುವಂತೆ ನೋಟಿಸ್ ನೀಡಲು ಕಾರ್ಯದರ್ಶಿರವರಿಗೆ ಸೂಚಿಸಲಾಯಿತು.

8. **ಕಾನೂನು ಮತ್ತು ಸುವ್ಯವಸ್ಥೆ** ಸಭೆಗೆ ಚಂದ್ರಾಬಡಾವಣೆ ಪೋಲಿಸ್ ಸ್ಟೇಷನ್ ಪೋಲಿಸ್ ಸಬ್ ಇನ್ಸ್‌ಪೆಕ್ಟರ್ ರವರು ಹಾಜರಾಗಿರುತ್ತಾರೆ. ಸಭೆಗೆ ತಮ್ಮ ಪೋಲಿಸ್ ಸ್ಟೇಷನ್ ನಲ್ಲಿ ಕಳೆದ ವರ್ಷಕ್ಕೆ ಹೋಲಿಸಿದರೆ ಕೋವಿಡ್–19 ವೈರಸ್‌ನಿಂದಾಗಿ ಕ್ರೈಮ್‌ಗಳ ಸಂಖ್ಯೆ ಕಡಿಮೆ ಇರುತ್ತದೆಂದು ತಿಳಸಿರುತ್ತಾರೆ.

9. **ರಸ್ತೆಯ ಗುಂಡಿ** ಮುಚ್ಚುವ ಬಗ್ಗೆ ಚರ್ಚಿಸಲಾಯಿತು. ರಸ್ತೆಯ ಗುಂಡಿಗಳನ್ನು ಕಾಲಕಾಲಕ್ಕೆ ಗುರುತಿಸಿ ಮುಚ್ಚಲು ಕ್ರಮಕೈಗೊಳ್ಳಲಾಗುತ್ತಿದೆಂದು ಸಹಾಯಕ ಅಭಿಯಂತರರು ತಿಳಿಸಿರುತ್ತಾರೆ. ಸಭೆಗೆ ರಸ್ತೆ ಗುಂಡಿಯನ್ನು ಮುಚ್ಚಲು ಗುತ್ತಿಗೆ ಪಡೆದಿರುವ ಗುತ್ತಿಗೆದಾರರು ಹಾಜರಾಗಿರುವುದಿಲ್ಲ. ಮುಂದಿನ ವಾರ್ಡ ಸಮಿತಿ ಸಭೆಗೆ ತಪ್ಪದೆ ಹಾಜರಾಗಲು ಸೂಚಿಸಬೇಕೆಂದು ತಿಳಿಸಲಾಯಿತು.

10. **ಟ್ರಾಫಿಕ್** ಬ್ಯಾಟರಾಯನಪುರ ಟ್ರಾಫಿಕ್ ಪೋಲಿಸ್ ಸ್ಟೇಷನ್‌ನಿಂದ ಸಹಾಯಕ ಸಬ್ ಇನ್ಸ್‌ಪೆಕ್ಟರ್ ರವರು ಸಭೆಗೆ ಹಾಜರಾಗಿದ್ದರು, ಸದರಿರವರು ಚಂದ್ರಗಿರಿ ಪ್ಯಾಲೇಸ್ ಸರ್ಕಲ್‌ನಲ್ಲಿ ಅಪಘಾತಗಳನ್ನು ತಪ್ಪಿಸಲು ರೋಡ್ ಬ್ರೇಕ್ (ಹಂಪ್ಸ್)ಗಳನ್ನು ಹಾಕಬೇಕೆಂದು ಹಾಗೂ ಬಿಳಿಬಣ್ಣವನ್ನು ಬಳಿಯಬೇಕೆಂದು ಕೋರಿಕೊಂಡಿರುತ್ತಾರೆ. ಸದರಿಯವರ ಮನವಿಯನ್ನು ಸಂಬಂಧಪಟ್ಟಂತೆ ಸಹಾಯಕ ಅಭಿಯಂತರರಿಗೆ ತಿಳಿಸಿ, ಕ್ರಮಕೈಗೊಳ್ಳಲುಯ ಕೋರಲಾಯಿತು. ಸದರಿ ಪೋಲಿಸ್ ಅಧಿಕಾರಿಯವರು ಸಭೆಯಲ್ಲಿ ರಸ್ತೆಗಳಲ್ಲಿ ಅಪಘಾತವಾದಾಗ ಸಂಚಾರಿ ಪೋಲಿಸ್ ಠಾಣೆಯಿಂದ ಪೋಲಿಸರು ಹಾಗೂ ಸಾರಿಗೆ ಇಲಾಖೆಯಿಂದ ಅಧಿಕಾರಿಗಳು ಅಪಘಾತದ ಬಗ್ಗೆ ತನಿಖೆ ಮಾಡಲು ಬರುತ್ತಾರೆ. ಆದರೆ ಪಾಲಿಕೆ ಅಧಿಕಾರಿಗಳಿಂದ ಯಾವುದೇ ಸಹಾಯ ಸಿಗುವುದಿಲ್ಲವೆಂದು ತಿಳಿಸಿರುತ್ತಾರೆ. ಸದರಿ ಅಧಿಕಾರಿಗೆ ಸಭೆಯಲ್ಲಿ ಹಾಜರಿದ್ದ ಸಹಾಯಕ ಅಭಿಯಂತರರು ಆ ವಾರ್ಡನ ಸಂಬಂಧಪಟ್ಟ ಅಭಿಯಂತರರಿಗೆ ತಾವು ದೂರವಾಣಿ ಮೂಲಕ ಅಪಘಾತದ ಕುರಿತಾಗಿ ತಿಳಿಸಿದ್ದಲ್ಲಿ ಹಾಜರಾಗುವಂತೆ ಕ್ರಮಕೈಗೊಳ್ಳಲಾಗುವುದೆಂದು ತಿಳಿಸಿರುತ್ತಾರೆ. ಎ.ಎಸ್.ಐ. ಬ್ಯಾಟರಾಯನಪುರ ಟ್ರಾಫಿಕ್ ಪೋಲಿಸ್ ಠಾಣೆ ರವರು ನಾಯಂಡಹಳ್ಳಿ ಸರ್ಕಲ್‌ನಲ್ಲಿ ಇರುವ ರೈಲ್ವೇ ಬ್ರಿಜ್ ಕೆಳಗಡೆ ಇತ್ತೀಚೆಗೆ ಅಪಘಾತ ಸಂಭವಿಸಿ ಒಬ್ಬ ಮಹಿಳೆ ಸಾವನ್ನಪ್ಪಿರುವುದನ್ನು ಗಮನಕ್ಕೆ ತಂದಿರುತ್ತಾರೆ. ಸದರಿ

ಅಪಘಾತ ಬ್ರಿಜ್ ನಿಂದ ಕೆಳಗಡೆ ನೀರು ಸೋರುವಿಕೆಯಿಂದ ಆಗಿರುತ್ತದೆ. ಸದರಿ ಬ್ರಿಜ್‌ನ್ನು ಸರಪಡಿಸಲು ಕೋರಿಕೊಂಡಿರುತ್ತಾರೆ. ಆದರೆ ಸದರಿ ಬ್ರಿಜ್‌ನ ವ್ಯಾಪ್ತಿಯು ವಾರ್ಡ ಸಂಖ್ಯೆ:128 ಕ್ಕೆ ಬರುವುದರಿಂದ ಆ ಸಂಬಂಧಪಟ್ಟ ನೋಡೆಲ್ ಅಧಿಕಾರಿಗಳ ಗಮನಕ್ಕೆ ತರಲಾಗುವುದು ಎಂದು ತಿಳಿಸಲಾಗಿರುತ್ತದೆ.

11. **ತೆರಿಗೆ** ಸಭೆಯಲ್ಲಿ ಹಾಜರಿದ್ದ ಕಂದಾಯ ಪರಿವೀಕ್ಷಕರಿಗೆ ತೆರಿಗೆ ವಸೂಲಾತಿಯನ್ನು ಮಾಡಲು ಹಾಗೂ ಸುಸ್ತಿದಾರರಿಗೆ ನೋಟಿಸು ಜಾರಿ ಮಾಡಿ ವಸೂಲಾತಿ ಕ್ರಮಕೈಗೊಳ್ಳುವುದು ಹಾಗೂ ಕಂದಾಯ ವಸೂಲಾತಿ ಮಾಡುತ್ತಿರುವ ಬಗ್ಗೆ ವಿವರವನ್ನು ನೋಡೆಲ್ ಅಧಿಕಾರಿರವರಿಗೆ ವರದಿ ನೀಡಲು ಸೂಚಿಸಲಾಯಿತು.

ಸಭೆಯ ವಾರ್ಡ ಸಮಿತಿಯ ಅಧ್ಯಕ್ಷರು ವಾರ್ಡ ಮಟ್ಟದ ಎಲ್ಲ ಅಧಿಕಾರಿ ಮತ್ತು ಸಿಬ್ಬಂದಿಗಳ ನಡುವೆ ಸಮನ್ವಯ ಸಾಧಿಸಲು ವಾಟ್ಸ್ ಅಪ್ ಗ್ರೂಪ್‌ನ್ನು ಮಾಡಲಾಗಿದ್ದು, ಕಾಲಕಾಲಕ್ಕೆ ಆಯಾ ಸಂಬಂಧಪಟ್ಟ ಇಲಾಖೆ ಸಿಬ್ಬಂದಿ ಮತ್ತು ಅಧಿಕಾರಿಗಳ ಮಾಹಿತಿಯನ್ನು ಹಂಚಿಕೆ ಮಾಡಿಕೊಂಡು ಸಾರ್ವಜನಿಕ ಕುಂದುಕೊರತೆಗಳನ್ನು ಬಗೆಹರಿಸಿಕೊಂಡು ಕ್ರಮವಹಿಸಬೇಕೆಂದು ತಿಳಿಸಿರುತ್ತಾರೆ.

ಅಂತಿಮವಾಗಿ ಅಧ್ಯಕ್ಷರು ಮಾತನಾಡಿ ಸಕಾಲದಲ್ಲಿ ಸಾರ್ವಜನಿಕರ ಕುಂದುಕೊರೆತಗಳನ್ನು ಆಲಿಸಿ ಸ್ಪಂದಿಸಿ ಪರಿಹರಿಸಲು ಕ್ರಮತೆಗೆದುಕೊಂಡು ಆಯಾ ಸಂಬಂಧಪಟ್ಟ ಇಲಾಖೆಗಳು ಸಮನ್ವಯತೆಯಿಂದ ಕೆಲಸ ನಿರ್ವಹಿಸಲು ಸೂಚಿಸಿದರು. ಅಧ್ಯಕ್ಷರು ವಂದನಾರ್ಪಣೆ ಮಾಡಿ ಸಭೆಯನ್ನು ಮುಕ್ತಾಯಗೊಳಿಸಿದರು.

| | |
|---|---|
| ಕಾರ್ಯದರ್ಶಿಗಳು | ನೋಡೆಲ್ ಅಧಿಕಾರಿ 17/10/2020 |
| ವಾರ್ಡ ಸಂಖ್ಯೆ,132, ಅತ್ತಿಗುಪ್ಪೆ | ವಾರ್ಡ ಸಂಖ್ಯೆ,132, ಅತ್ತಿಗುಪ್ಪೆ |